ಇದ್ದರು. ದಿ:31.3.2015ಕ್ಕೆ ಅವೆಲ್ಲವುಗಳ ಕೂಡ ಕೆಲಸ ಮುಗಿಯುತ್ತದೆ. ಹಾಗಾಗಿ, ನಮಗೆ 39 ಹುದ್ದೆಗಳು ಲಭ್ಯವಾಗುತ್ತವೆ. ಬಹುಶಃ ಇನ್ನು 2 ತಿಂಗಳಲ್ಲಿ ಪರಿಸ್ಥಿತಿ ಖಂಡಿತವಾಗಿಯೂ ಸುಧಾರಿಸುತ್ತದೆ ಮತ್ತು ನಾವು ಈಗಾಗಲೇ ಇದಲ್ಲದೆ, ಬೇರೆ ಬೇರೆ ಹುದ್ದೆಗಳನ್ನು ಸೃಷ್ಟಿ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಸುಮಾರು 850 ಹುದ್ದೆಗಳನ್ನು ಹೊಸದಾಗಿ ಸೃಷ್ಟಿ ಮಾಡುವುದಕ್ಕೆ Finance Department ನವರು ಕೂಡ ಒಪ್ಪಿಗೆ ಕೊಟ್ಟಿದ್ದಾರೆ. ನಾವು ಕೂಡ ಒಪ್ಪಿ ಈಗಾಗಲೇ High Court ಗೆ ಕೂಡ ನಾವು ಮನವಿ ಮಾಡಿದ್ದೇವೆ. ಪ್ರಕ್ರಿಯೆಯಲ್ಲಿ ಯಾವುದೇ ರೀತಿಯಲ್ಲಿ ತೊಂದರೆಯಾಗದ ರೀತಿಯಲ್ಲಿ ಆದಷ್ಟು ಬೇಗ ಎಲ್ಲ ಹುದ್ದೆಗಳನ್ನು ತುಂಬತಕ್ಕಂಥ ಕೆಲಸವನ್ನು ನಾವು ಮಾಡುತ್ತೇವೆ.

ಪೊಲೀಸ್ ಹೊರ ಠಾಣೆ ಪ್ರಾರಂಭಿಸುವುದು

04 (220); ಶ್ರೀ ಸುಬ್ಬಾರೆಡ್ಡಿ ಎಸ್.ಎನ್ (ಬಾಗೇಪಲ್ಲಿ)

ಅ) ಬಾಗೇಪಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ ಪೊಲೀಸ್ ಹೊರ ಠಾಣೆಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭ ಮಾಡಲಾಗುವುದು;

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು (ಪೂರ್ಣ ವಿವರ ನೀಡುವುದು)?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಬಾಗೇಪಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಗೂಳೂರು ಪೊಲೀಸ್ ಹೊರ ಠಾಣೆಯಿದ್ದು, ಹೊಸದಾಗಿ ಪೊಲೀಸ್ ಹೊರ ಠಾಣೆಗಳನ್ನು ತೆರೆಯುವ ಯಾವುದೇ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ.

ಆ) ಮೇಲೆ ತಿಳಿಸಿದಂತೆ ಬಾಗೇಪಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ, ಗೂಳೂರು ಹೊರತುಪಡಿಸಿ, ಬೇರೆ ಸ್ಥಳಗಳಲ್ಲಿ ಹೊರ ಠಾಣೆ ತೆರೆಯುವ ಪ್ರಸ್ತಾವನೆ ಇರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಶ್ರೀ ಎಸ್.ಎನ್. ಸುಬ್ಬಾರೆಡ್ಡಿ: ಉತ್ತರ ಒದಗಿಸಿದ್ದಾರೆ. ಆದರೆ ಹೊರ ಠಾಣೆಯ ಯಾವುದೇ ಪ್ರಸ್ತಾವನೆ ಇರುವುದಿಲ್ಲವೆಂದು ಹೇಳಿದ್ದಾರೆ. ಆದರೆ, ನನ್ನ ಕ್ಷೇತ್ರದಲ್ಲಿ ಮಿಟ್ಟೆಮರಿ ಮತ್ತು ಎಲ್ಲೋಡು ಎಂದು ಎರಡು ತಾಲ್ಲೂಕುಗಳಿವೆ. ಆ ಹೋಬಳಿ ಮಟ್ಟಕ್ಕೆ ನನಗೆ ಹೊರ ಠಾಣೆ ಬೇಕೇಬೇಕು. ಏಕೆಂದರೆ, ಅದು ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿರುವ ಜಾಗ. ಸ್ವಲ್ಪ naxalism ಪ್ರಭಾವ ಇರುವಂಥ ಪ್ರದೇಶಗಳು. ಅಲ್ಲಿ ವಿಪರೀತ crimes ಜಾಸ್ತಿಯಾಗುತ್ತಿದೆ. ಆದ್ದರಿಂದ ಎರಡು ಹೊರ ಠಾಣೆ ಬೇಕೇ ಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್: ಈಗಾಗಲೇ 4 ಪೋಲೀಸ್ ಠಾಣೆಗಳು ಕೆಲಸ ಮಾಡುತ್ತಿವೆ. ಗೂಳೂರಿನಲ್ಲಿ ಒಂದು outpost ಸಮೇತ ಇದೆ. ರಾಷ್ಟ್ರೀಯ ಪೊಲೀಸ್ ಆಯೋಗದವರು ಮಾನದಂಡ ಕೊಟ್ಟಿದ್ದಾರೆ. ಅದರ ಪ್ರಕಾರ ಈಗ ಅಲ್ಲಿ ಅವಶ್ಯಕತೆ ಇರುವುದಿಲ್ಲ. ಮತ್ತೆ ಮುಂದೆ ಅವಶ್ಯಕತೆ ಇದ್ದರೆ ಪರಿಶೀಲನೆ ಮಾಡಿ, ಅವಶ್ಯಕತೆಗೆ ಅನುಸಾರವಾಗಿ ಮಾಡುತ್ತೇವೆ.

ಪ್ರಶ್ನೆ ಸಂ.05(14)

ಮಾನ್ಯ ಸದಸ್ಯರಾದ ಕೃಷ್ಣಾರೆಡ್ಡಿ ಎಂ.ರವರು ಸದನದಲ್ಲಿ ಹಾಜರಿರಲಿಲ್ಲ.

ಲಕ್ಕಿ ಆರ್ಟಿಫಿಶಿಯಲ್ ಸ್ಯಾಂಡ್ ಇಂಡಸ್ಟ್ರಿ ವಿರುದ್ಧ ಕ್ರಮ

06 (174); ಶ್ರೀ ಕೋಳಿವಾಡ ಕೆ.ಬಿ. (ರಾಣೇಬೆನ್ನೂರು)

ಅ) ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಲಕ್ಕಿ ಆರ್ಟಿಫಿಶಿಯಲ್ ಸ್ಯಾಂಡ್ ಇಂಡಸ್ಟ್ರಿಸ್‌ನ ಮಾಲೀಕರ ಮೇಲೆ ಅನೇಕ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಘಟಕವು ಕಾನೂನು ಬಾಹಿರವಾಗಿ ಮಾಡಿರುವ ತಪ್ಪುಗಳಾವುವು;